ಹೆಚ್ಚುವರಿ ಹಿರಿಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೀದರ

**ಸಿ.ಸಿ. ನಂ. 2204/2022**

**ದಿ: 03-07-2023.**
**CW-11. PW-8.**

ಸಾಕ್ಷಿಯ ಹೆಸರು : ಎಂ. ವಿಲಾಸ
ತಂದೆ ಹೆಸರು : ಮಾಣಿಕರಾವ್
ವಯಸ್ಸು : 56 ವರ್ಷ
ಉದ್ಯೋಗ : ಎ.ಎಸ್.ಐ. ಬಗದಲ್ ಠಾಣೆ, .
ವಾಸಸ್ಥಳ : ಬಗದಲ್ ತಾ. ಬೀದರ

ಸಾಕ್ಷಿಯನ್ನು ಇಂದು ದಿ**: 03-07-2023** ರಂದು ಕರೆಸಿ**,** ಪ್ರಮಾಣಿಕರಿಸಲಾಯಿತು**.**

**:-ಸಾಕ್ಷಿಯ ಮುಖ್ಯ ವಿಚಾರಣೆ ಹಿರಿಯ ಸಸಅ ಅವರಿಂದ:-**

1. ನಾನು 18-07-2021 ರಿಂದ ಇಲ್ಲಿಯವರೆಗೆ ಬಗದಲ್ ಪೊಲೀಸ ಠಾಣೆಯಲ್ಲಿ ಎ.ಎಸ್.ಐ. ಆಗಿ ಕೆಲಸ ಮಾಡಿದ್ದೇನು. ದಿ: 22-03-2021 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ-1 ರವರು ರಾತ್ರಿ 7-30 ಗಂಟೆಗೆ ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಠಾಣಾ ಮುಕದ್ದಮೆ ಸಂಖ್ಯೆ: 27/2021 ರಂತೆ ಪ್ರಕರಣ ದಾಖಲಿಸಿ, ಪ್ರ.ವ ವರದಿ ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದೇನೆ. ದಿ: 23-03-2021 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-4 ತೋರಿಸಿದ ಸ್ಥಳದಲ್ಲಿ ಚಾಸಾ-2 & 3 ರ ಸಮಕ್ಷಮ ಬೆಳಿಗ್ಗೆ 9 ರಿಂದ 10 ಗಂಟೆ ವರೆಗೆ ಸ್ಥಳ ಪಂಚನಾಮೆ ಮಾಡಿದ್ದೇನು. ಅದೇ ದಿನ ಚಾಸಾ-4 ರಿಂದ 6 ರವರ ಹೇಳಿಕೆ ಪಡೆದಿದ್ದೇನೆ. ದಿ: 29-03-2021 ರಂದು ಚಾಸಾ-7 ರವರಿಂದ ಚಾಸಾ-1 ರವರ ಮಾಲೀಕತ್ವದ

ಹೊಲ ಸರ್ವೆ ನಂ. 124/2 ರ ಪಹಣಿಯನ್ನು ಪಡೆದುಕೊಂಡು ಆರೋಪಿ ಪತ್ತೆ ಕುರಿತು ಚಾಸಾ-8 & 9 ರವರನ್ನು ನೇಮಕಮಾಡಿದ್ದು, ಆರೋಪಿಗಳು ಎಲ್ಲೂ ಸಿಕ್ಕಿಲ್ಲ ಎಂದು ವರದಿ ನೀಡಿರುತ್ತಾರೆ. 1 & 2 ನೇ ಆರೋಪಿತರಿಗೆ ದಸ್ತಗಿರಿಕ್ರಮ ಅನುಸರಿಸಿ ಜಾಮೀನನ ಮೇಲೆ ಬಿಟ್ಟಿರುತ್ತೇನೆ.

2. 3 ನೇ ಆರೋಪಿ ತಲೆ ಮರೆಸಿಕೊಂಡಿದ್ದು, ಚಾಸಾ-10 ರವರಿಂದ ಕಲಂ 65 ರ ಪ್ರಮಾಣ ಪಡೆದು, ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ. ದೂರು ಈಗಾಗಲೇ ನಿಪಿ-2 ಎಂದು ಗುರ್ತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2 ಬಿ ಎಂದು, ಎಫ್.ಐ.ಆರ್. ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6 ಎ ಎಂದು, ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರ್ತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-1 ಸಿ ಎಂದು, ತಹಶೀಲ್ದಾರರು ನೀಡಿದ ಮಾಲೀಕತ್ವ ಪ್ರಮಾಣ ಪತ್ರವನ್ನು ನಿಪಿ 5 ಎಂದು ಗುರ್ತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-5 ಎ ಎಂದು, ಆರ್.ಟಿ.ಸಿ ಯನ್ನು ಈಗಾಗಲೇ ನಿಪಿ-3 ಎಂದು ಗುರ್ತಿಸಲಾಗಿದ್ದು, ಚಾಸಾ-8 & 9 ರವರು ನೀಡಿದ 3 ವರದಿಗಳನ್ನು ನಿಪಿ-8 ರಿಂದ 10 ಎಂದು, ಸಾಕ್ಷಿ ಸಹಿಗಳನ್ನು ನಿಪಿ-8 ಎ ರಿಂದ 10 ಎ ಎಂದು ಗುರ್ತಿಸಲಾಯಿತು. ಕಲಂ 65 ಬಿ ಪ್ರಮಾಣ ಪತ್ರವನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-11 ಎ ಎಂದು, ಗುರ್ತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರ್ತಿಸುತ್ತೇನೆ, ಗೈರು ಹಾಜರಿದ್ದು ವಿನಾಯತಿ ಅರ್ಜಿ ಸಲ್ಲಿಸಿದ್ದಾರೆ.

<u>**ಪಾಟೀ ಸವಾಲು:ಆರೋಪಿ ಪರ ಶ್ರೀ: ಬಿ. ಸಂಜೀವಕುಮಾರ. ವಕೀಲರಿಂದ:**</u>

3. ಘಟನೆ ಹಾಗೂ ಪ್ರಕರಣ ದಾಖಲಾದ ದಿನಾಂಕಗಳ ನಡುವೆ 6 ದಿನಗಳ ವಿಳಂಬವಾಗಿದೆ ಎಂದರೆ ಸರಿ. ಸುಳ್ಳುಪ್ರಕರಣ ದಾಖಲು ಮಾಡುವ ಸಂಬಂಧ 6 ದಿನಗಳ ಕಾಲ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ. 124/2 ರ ಜಮೀನಿನ ಆಜು-ಬಾಜು ಮಾಲೀಕ ಹೇಳಿಕೆ ಪಡೆದಿದ್ದೀರಾ ಎಂದರೆ ಇಲ್ಲ. ಚಾಸಾ-4 & 5 ರವರು ಚಾಸಾ-1 ರವರ ವೈನ್ ಶಾಪ್ ನಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 124/2 ಸರ್ಕಾರಿ ಜಮೀನು ಎಂದು ಚಾಸಾ-7 ರವರು ವರದಿ ನೀಡಿದ್ದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಜಾಗಕ್ಕೆ ಅತೀಕ್ರಮ ಪ್ರವೇಶ ನೀಡಿದ ಸಂಬಂಧ ಸರ್ವೆ ಮಾಡಿಸಿ ನಕಾಷೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ. ಸರ್ವೆ ಮಾಡಲು ಅರ್ಜಿ ಕೊಟ್ಟಿದ್ದೀರಾ ಎಂದರೆ ಇಲ್ಲ.

4. ಆರೋಪಿತರು ಸದರಿ ಜಮೀನಿನ ಸ್ವಾಧೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದು ಅವರನ್ನು ಜಮೀನಿನಿಂದ ಹೊರ ಹಾಕಲು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂಧ ಪಟ್ಟಂತೆ ಸಿವಿಲ್ ನ್ಯಾಯಾಲಯದಲ್ಲಿ ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಗೊತ್ತಿಲ್ಲ. ಆರೋಪಿತರ ವಿರುದ್ಧ ಇನ್ನೂ 2-3 ಪ್ರಕರಣಗಳನ್ನು ನಾನು ದಾಖಲು ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಚಾಸಾ-1 ರವರು ಶ್ರೀಮಂತರಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಕರಣ ದಾಖಲು ಮಾಡಿ, ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಸ್ವಂತಂತ್ರ ಸಾಕ್ಷಿದಾರರಿದ್ದು ಅವರ ಹೇಳಿಕೆಯನ್ನು ದಾಖಲಿಸಿಲ್ಲ, ಚಾಸಾ-1 ರವರ ಸ್ನೇಹಿತರನ್ನು ಸಾಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಕ್ಕಣೆಗಳನ್ನು ಠಾಣಾ ರೈಟರ್ ತಯಾರು ಮಾಡಿರುತ್ತಾರೆ. ನಾನು ಸ್ಥಳಕ್ಕೆ ಹೋಗಿಲ್ಲ, ಸ್ಥಳದಲ್ಲಿ ಯಾವುದೆ ಪಂಚನಾಮೆ ಮಾಡಿಲ್ಲ, ಆರೋಪಿತರ ಕಬ್ಜೆಯಲ್ಲಿರುವ ಜಮೀನಿನಿಂದ ಹೊರ ಹಾಕುವ ಸಂಬಂಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

(ಮರು ವಿಚಾರಣೆ ಇರುವುದಿಲ್ಲ)
(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್.ಸಿ. ಬೀದರ